TRUALT BIOENERGY LIMITED
(FORMERLY KNOWN AS TRUALT ENERGY LIMITED)
080 - 23255000 | 23255600
contact@trualtbioenergy.com
www.trualtbioenergy.com
GSTIN - 29AAICT5347A1ZB
CIN - L15400KA2021PLC145978

August 8, 2026

BSE Limited,	National Stock Exchange of India Limited,
Department of Corporate Services,	The Listing Department,
Phiroze Jeejeebhoy Towers,	Exchange Plaza,
Dalal Street, Fort,	Bandra Kurla Complex,
Mumbai-400001	Mumbai-400051
Scrip Code: 544545	Symbol: TRUALT

Sub: Newspaper Advertisement – Disclosure under Regulation 30 of the SEBI (Listing Obligations and Disclosure Requirements) Regulations, 2015 ("SEBI Listing Regulations")

Dear Sir/Madam,

Pursuant to Regulation 30 read with Schedule III Part A Para A of SEBI Listing Regulations, we enclose the copies of newspaper advertisement published in Financial Express – English and Vishwavani - Kannada, intimating that 5th Annual General Meeting of the Company will be held on Monday, August 31, 2026, at 11:30 a.m. (IST) through Video Conferencing (VC) /Other Audio-Visual Means (OAVM).

The disclosure will also be available on the Company's website: www.trualtbioenergy.com

We request you to kindly take the above on record.

Thanking you,
Yours faithfully,

For **TruAlt Bioenergy Limited**

MONU KUMAR

Digitally signed by MONU KUMAR
Date: 2026.08.08 10:05:49 +05'30'

Monu Kumar
Company Secretary & Compliance Officer
M. No. A38853

Encl: As above

Return to cost-based pricing for essential drugs: House panel

MANU KAUSHIK
New Delhi, August 7

A PARLIAMENTARY PANEL has asked the government to examine the possibility of reverting to a cost-based mechanism for fixing the prices of essential medicines, as the existing market-based regime has raised concerns over affordability and pricing transparency. The panel suggested that the shift could be enabled through "suitable statutory amendments", noting that sole reliance on market data for price fixation may fail to detect price distortions arising from market monopolies and excessive mark-ups across the pharmaceutical supply chain.

The Parliamentary Standing Committee also sought clarification from the Department of Pharmaceuticals (DoP) on whether the transition from cost-based to market-based pricing created room for drugmakers to exploit regulatory gaps.

It also asked the government why cost audits, despite being a statutory tool, are not used for price fixation, and suggested the need to undertake backward cost analysis to trace profit margins across manufacturers, distributors and retailers.

The government, however, defended the existing regime by stating that the Drugs (Prices Control) Order (DPCO), 2013 does not permit cost-based pricing. "There is no provision in DPCO, 2013 to consider cost-audit-based data for price fixation," DoP told the committee adding that ceiling prices are determined using market data by averaging the prices charged to retailers (PTR) by all brands — with at least a 1% market share — and adding a 16% retailer margin.

Before the DPCO 2013 came into force, drug prices were fixed under a cost-based system that linked ceiling prices to manufacturers' production costs and prescribed margins. The shift to market-based pricing under the National Pharmaceutical Pricing Policy (NPPP), 2012 was intended to make the process more transparent while balancing affordability with industry growth, investment and innovation.

The department argued that tighter price controls across the board could discourage fresh investments, technology upgrades and capacity expansion, ultimately affecting long-term availability of medicines.

REFINING SYSTEM

- Parliamentary panel has suggested that the shift could be enabled through "suitable statutory amendments"
- The panel asked govt why cost audits are not used for price fixation
- It suggests the need to undertake backward cost analysis to trace profit margins
- Before DPCO 2013 came into force, drug prices were fixed under a cost-based system

Viable water cess regime for hydro projects sought

SAURAV ANAND
New Delhi, August 7

NEW HYDROPOWER PROJECTS could cost around ₹7-8 per unit, making it increasingly difficult to secure power purchase agreements (PPAs), prompting a parliamentary panel to recommend a dedicated viability gap funding (VGF) framework and a nationally agreed water cess regime to improve project economics.

The Committee on Public Undertakings, in its 31st report tabled in Parliament, said water cess imposed by some states can add 60-70 paise per unit to hydropower tariffs. It recommended that the Ministry of Power develop a standard Model Implementation Agreement covering dispute resolution, change-in-law protection and a mutually acceptable framework for water cess.

The panel's intervention comes as NHPC faces changes by states to previously agreed project terms, including demands for higher free power, withdrawal or reassessment of SGST waivers and water cess. Such changes, it said, have adversely affected project viability and delayed execution.

"In certain states, we have observed that after signing the implementation agreement, the state government has not honoured the clauses," the NHPC CMD told the committee.

In some cases, the changes were "making the project unviable", preventing projects from commencing even two years after their scheduled start.

Panel asks govt to create strategic fertiliser reserve

SANDIP DAS
New Delhi, August 7

THE GOVERNMENT MUST formulate a contingency plan for creating a strategic fertiliser reserve and protocol to strengthen preparedness against global supply disruptions, the parliamentary standing committee on chemicals and fertilisers said in a report.

The committee has recommended creating prescribed minimum opening stocking norms for major fertilisers

The panel has recommended creating prescribed minimum opening stocking norms for major fertilisers at the national and state levels ahead of each cropping season, advance procurement, gas allocation coordination with supplier countries and examining the feasibility of establishing a regional strategic reserve of highly import-dependent Diammonium Phosphate and Muriate of Potash.

It noted that recent geopolitical developments, including the West Asia crisis, highlighted the vulnerability of fertiliser supply chains to external disruptions affecting both imports and domestic production.

Currently, the Department of Fertilisers does not maintain a formal buffer stock policy. Instead, it relies on the concept of opening stocks supported by dynamic supply planning and back-to-back imports.

India sees more AI-linked hiring than layoffs

INDIA, THE WORLD'S back office for many global companies, is emerging as a key test case for artificial intelligence's (AI) impact on employment, with AI-related hiring outpacing job losses so far, according to Nomura Holdings.

The country's sheer scale means it is seeing the "largest absolute impact" from AI across layoffs, hiring freezes and recruitment, making it "ground zero" for assessing the technology's effect on jobs, Nomura economists Sonal Varma and Si Ying Toh wrote in a report analysing 69 anecdotes across Asia, mostly from 2022 through August 2026.

India recorded 83,100 AI-related hires during the period, compared with 31,921 layoffs and attrition, according to the report released Friday. "Most firing cases are support teams replaced by chatbots, while most hiring cases are of IT-services graduates that firms explicitly credit to AI demand," the economists said.

AI adoption is creating a two-tier labour market in countries like India and Korea, reducing demand for entry-level workers while boosting demand for more experienced employees with a deeper understanding of the business context, they added.

Across Asia, AI-related hiring totalled 130,758 jobs during the study period, with more than 90% of those positions in technology.

BLOOMBERG

NEW JOBS



Note: Nomura study based on sample comprising of 69 anecdotes across Asia, mostly from 2022 until August 2026

Source: Nomura Holding

Oil India profit jumps 3-fold in Q1

OIL INDIA ON Friday reported a more than three-fold jump in standalone net profit for the first quarter of FY27, helped by higher crude oil price realisations and increased production.

Its standalone net profit rose to ₹2,870 crore for the quarter ended June 30, from ₹813 crore in the corresponding period last year. Oil India's crude oil realisation increased 11% to $98.73 per barrel, while its net profit margin more than doubled to 36.07% from 16.23% a year earlier. Revenue from operations climbed 59% year-on-year to ₹7,958 crore.

REUTERS

Govt receives 87 proposals under industrial parks scheme

THE MINISTRY OF Commerce and Industry has received 87 applications from 24 states and Union territories in the first round of Phase I of the Bharat Audyogik Vikas Yojana (BHAVYA), the Centre's flagship scheme to develop industrial parks across the country, Parliament was informed.

The applications will now be evaluated and scored in accordance with the eligibility and assessment criteria prescribed under the scheme's guidelines, Minister of State for Commerce and Industry Jitin Prasada said in a written reply to a question in the Rajya Sabha.

FE BUREAU

ಸಮಾಚಾರ ಸಣ್ಣದಲ್ಲ

ಕಳಪೆ ಕಾಮಗಾರಿ ಆರೋಪ: ನೋಟಿಸ್

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಮಿಸಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಯ ಮೇಜರ್ ಆರ್ಟೀರಿಯಲ್ ರಸ್ತೆ ಪಕ್ಕದ ಪಾದಚಾರಿ ಮಾರ್ಗದಲ್ಲಿನ ಕಾಂಕ್ರೀಟ್ ಸ್ಲಾಬ್ ಸಂಪೂರ್ಣವಾಗಿ ಕಿತ್ತುಹೋಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟ ಗುತ್ತಿಗೆದಾರರು ಹಾಗೂ ಯೋಜನಾ ನಿರ್ವಹಣಾ ಸಲಹೆಗಾರರಿಗೆ ಬಿಡಿಎ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದೆ. ಪಾದಚಾರಿ ಮಾರ್ಗದ ಕಳಪೆ ಕಾಮಗಾರಿ ಬಗ್ಗೆ ನಾಡಪ್ರಭು ಕೆಂಪೇಗೌಡ ಬಡಾವಣೆಯ ನಿವಾಸಿಗರು ಹಾಗೂ ನಿವೇಶನ ಹಂಚಿಕೆದಾರರ ಸಂಘ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಈ ಕುರಿತು ಮಾಧ್ಯಮಗಳಲ್ಲೂ ವರದಿಯಾಗಿತ್ತು. ಪ್ರಕರಣ ಗಂಭೀರವಾಗಿ ಪರಿಗಣಿಸಿರುವ ಬಿಡಿಎ, ಕಳಪೆ ಕಾಮಗಾರಿಗೆ ಹೊಣೆಗಾರರಾದವರ ವಿರುದ್ಧ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ವಿಚಾರಣೆ ಆರಂಭಿಸಿದೆ, ತನಿಖೆ ಪ್ರಗತಿಯಲ್ಲಿದೆ. ಸಾರ್ವಜನಿಕರ ಸುರಕ್ಷತೆ ಗಮನದಲ್ಲಿಟ್ಟುಕೊಂಡು ಮಾಹಿತಿ ದೊರೆತ 24 ಗಂಟೆಗಳೊಳಗೆ ಹಾನಿಗೊಳಗಾಗಿದ್ದ ಕಾಂಕ್ರೀಟ್ ಸ್ಲಾಬ್ ಅನ್ನು ದುರಸ್ತಿಪಡಿಸಲಾಗಿದೆ. ಕಳಪೆ ಕಾಮಗಾರಿಗೆ ಕಾರಣರಾದವರ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಬಿಡಿಎ ಸ್ಪಷ್ಟಪಡಿಸಿದೆ.

ತ್ಯಾಜ್ಯದಿಂದ ಸ್ವಾತಂತ್ರ್ಯ ಅಭಿಯಾನಕ್ಕೆ ವೇಗ ನೀಡಿ

ಬೆಂಗಳೂರು: ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ತ್ಯಾಜ್ಯದಿಂದ ಸ್ವಾತಂತ್ರ್ಯ ಅಭಿಯಾನ ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು. ವಿವಿಧ ಇಲಾಖೆ ಕೈಗೊಳ್ಳುವ ಕಾಮಗಾರಿಗಳಿಂದ ಉತ್ಪತ್ತಿಯಾಗುವ ಕಟ್ಟಡ ಮತ್ತು ನಿರ್ಮಾಣ ತ್ಯಾಜ್ಯ ಆಯಾ ಇಲಾಖೆಗಳೇ ಕಡ್ಡಾಯವಾಗಿ ತೆರವುಗೊಳಿಸಿ ನಿಗದಿತ ಡಂಪಿಂಗ್ ಸ್ಥಳಕ್ಕೆ ಸಾಗಿಸಬೇಕು. ನಿರ್ಲಕ್ಷ್ಯ ವಹಿಸುವ ಇಲಾಖೆಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು. ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಕಟ್ಟಡ ತ್ಯಾಜ್ಯ ಶೀಘ್ರ ತೆರವುಗೊಳಿಸುವ ಗುರಿ ಹೊಂದಲಾಗಿದ್ದು, ಸುಮಾರು 20 ಸಾವಿರ ಟನ್ ಈ ತ್ಯಾಜ್ಯ ತೆರವುಗೊಳಿಸುವ ಯೋಜನೆ ರೂಪಿಸಲಾಗಿದೆ ಎಂದು ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ತಿಳಿಸಿದರು.

ಬ್ಲ್ಯಾಕ್‌ಸ್ಪಾಟ್ ಸ್ವಚ್ಛತೆಗೆ ಆಗಸ್ಟ್ 15ರ ಗಡುವು

ಬೆಂಗಳೂರು: ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಪಾದಚಾರಿ ಮಾರ್ಗ ಒತ್ತುವರಿ ತೆರವು, ಅನಾಥ ವಾಹನಗಳ ತೆರವು ಹಾಗೂ ತ್ಯಾಜ್ಯದಿಂದ ಸ್ವಾತಂತ್ರ್ಯ ಅಭಿಯಾನಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಪಾಲಿಕೆ ಆಯುಕ್ತ ಡಾ. ರಾಜೇಂದ್ರ ಕೆ.ವಿ. ಅಧಿಕಾರಿಗಳಿಗೆ ಸೂಚನೆ ನೀಡಿದರು.ಪಾಲಿಕೆ ಕಚೇರಿಯಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಸಚಿವ ಕೃಷ್ಣ ಬೈರೇಗೌಡ ಅವರ ನಿರ್ದೇಶನದಂತೆ ಎಲ್ಲ ಹತ್ತು ವಿಭಾಗಗಳಲ್ಲಿ ಅಭಿಯಾನ ಸಮನ್ವಯದಿಂದ ನಡೆಸಿ ಗುರಿ ತಲುಪುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಇತ್ತೀಚೆಗೆ ಆರಂಭಿಸಿರುವ 200 ಬ್ಲ್ಯಾಕ್ ಸ್ಪಾಟ್‌ಗಳ ಸ್ವಚ್ಛತೆ ಮತ್ತು ಸುಂದರೀಕರಣ ಕಾರ್ಯ ಆ.15ರೊಳಗೆ ಪೂರ್ಣಗೊಳಿಸಬೇಕು. ಪಾದಚಾರಿ ಮಾರ್ಗಗಳ ಮೇಲಿನ ಒತ್ತುವರಿ ತೆರವುಗೊಳಿಸುವ ವೇಳೆ ಅಡ್ಡಿಪಡಿಸಿದರೆ ಪೊಲೀಸ್ ಇಲಾಖೆಯ ಸಹಕಾರ ಪಡೆದುಕೊಳ್ಳಬೇಕು. ಪುನಃ ಒತ್ತುವರಿ ಮಾಡಿದವರ ವಿರುದ್ಧ ಹೆಚ್ಚಿನ ದಂಡ ವಿಧಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

15 ದಿನದಲ್ಲಿ ವಾಹನ ಪಡೆಯದಿದ್ದರೆ ಹರಾಜು

ಬೆಂಗಳೂರು: ಸಾರ್ವಜನಿಕ ರಸ್ತೆ, ಪಾದಚಾರಿ ಮಾರ್ಗ ಹಾಗೂ ಇತರ ಸಾರ್ವಜನಿಕ ಸ್ಥಳಗಳಲ್ಲಿ ದೀರ್ಘಕಾಲದಿಂದ ಬಿಟ್ಟಿರುವ ವಾಹನಗಳ ವಿರುದ್ಧ ಬೆಂಗಳೂರು ಪೂರ್ವ ನಗರ ಪಾಲಿಕೆ ಕಠಿಣ ಕ್ರಮ ಕೈಗೊಂಡಿದೆ. ಈಗಾಗಲೇ ವಶಪಡಿಸಿಕೊಳ್ಳಲಾದ ವಾಹನಗಳ ಮಾಲೀಕರು 15 ದಿನಗಳೊಳಗೆ ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಿ ವಾಹನ ಬಿಡುಗಡೆ ಮಾಡಿಸಿಕೊಳ್ಳದಿದ್ದರೆ, ಯಾವುದೇ ಹೆಚ್ಚುವರಿ ಸೂಚನೆ ನೀಡದೆ ಸಾರ್ವಜನಿಕ ಹರಾಜಿನ ಮೂಲಕ ವಿಲೇವಾರಿ ಮಾಡಲಾಗುವುದು. ಪಾಲಿಕೆಯು ವಶದಲ್ಲಿರುವ ಕೆಎ-51-ಬಿ-9713, ಸಿಯಾಜ್ ಫಲಕ ವಿಲ್ಲದ ಟಾಟಾ ಇಂಡಿಕಾ, ಕೆಎ-51-ಎಂಇ-6087 ಸೇರಿ ಒಟ್ಟು 6 ವಾಹನಗಳ ಮಾಲೀಕರು ವಾಹನದ ಮಾಲೀಕತ್ವದ ದಾಖಲೆಗಳನ್ನು ಸಲ್ಲಿಸಿ ಅನ್ವಯವಾಗುವ ಶುಲ್ಕ ಹಾಗೂ ದಂಡ ಪಾವತಿಸಿ ಬಳಿಕ ವಾಹನ ಬಿಡುಗಡೆ ಮಾಡಿಸಿಕೊಳ್ಳಬಹುದು ಎಂದು ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ತಿಳಿಸಿದ್ದಾರೆ.

18 ವರ್ಷಗಳಿಂದ ಅಖಂಡ ರಾಮಾಯಣ ಪಾರಾಯಣ

ಬೆಂಗಳೂರು: ನಗರದ ಎಲಚೇನಹಳ್ಳಿಯಲ್ಲಿರುವ ಮಹಾವಿರ ದೇವಸ್ಥಾನ, ಭಕ್ತರಲ್ಲಿ ಚಿಕ್ಕ ವೃಂದಾವನ ಎಂದೇ ಪ್ರಸಿದ್ಧಿಯಾಗಿದ್ದು, ಕಳೆದ 18 ವರ್ಷಗಳಿಂದ ನಿರಂತರವಾಗಿ ನಡೆಯುತ್ತಿರುವ ಅಖಂಡ ರಾಮಾಯಣ ಪಾರಾಯಣ ಹಾಗೂ ವಿವಿಧ ಧಾರ್ಮಿಕ ಆಚರಣೆಗಳ ಮೂಲಕ ಆಧ್ಯಾತ್ಮಿಕ ಕೇಂದ್ರವಾಗಿ ಗುರುತಿಸಿಕೊಂಡಿದೆ. ಸ್ವರ್ಗೀಯ ಶ್ಯಾಮಸುಂದರ ಸುರೇಕಾ ಮತ್ತು ಸುಮಿತ್ರಾ ದೇವಿ ಸುರೇಕಾ ಅವರ ದಿವ್ಯ ಸಂಕಲ್ಪದ ಫಲವಾಗಿ ನಿರ್ಮಾಣಗೊಂಡ ಈ ಧಾಮದಲ್ಲಿ 2009ರ ಏಪ್ರಿಲ್ 9ರಂದು ಹನುಮ ಜಯಂತಿಯಂದು ಪ್ರಾಣ ಪ್ರತಿಷ್ಠೆ ನೆರವೇರಿದ ಬಳಿಕ ಆರಂಭವಾದ ಅಖಂಡ ರಾಮಾಯಣ ಪಾರಾಯಣ ಇಂದಿಗೂ ಒಂದು ದಿನವೂ ನಿಲ್ಲದೆ ಸಾಗುತ್ತಿದೆ. ಈ ವಿಶೇಷತೆಯೇ ದೇಶದ ವಿವಿಧ ಭಾಗಗಳಿಂದ ಭಕ್ತರನ್ನು ಸೆಳೆಯುತ್ತಿದೆ ಎಂದು ಎಲಚೇನಹಳ್ಳಿಯಲ್ಲಿರುವ ಮಹಾವೀರ ದೇವಸ್ಥಾನದ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಒಬಿಸಿ ಮಹಾಸಂಘದ 11ನೇ ರಾಷ್ಟ್ರೀಯ ಮಹಾ ಸಮಾವೇಶ ಉದ್ಘಾಟಿಸಿದ ಸಿಎಂ

ಸರ್ವರಿಗೂ ಸಾಮಾಜಿಕ ನ್ಯಾಯ ಒದಗಿಸಲು ಬದ್ಧ

ಬೆಂಗಳೂರು: ನಮ್ಮ ಸರಕಾರ ಸಾಮಾಜಿಕ ಆರ್ಥಿಕ ಸಮೀಕ್ಷೆ ನಡೆಸಿದ್ದು, ಅದನ್ನು ಜಾರಿಗೆ ತಂದು ಸಾಮಾಜಿಕ ನ್ಯಾಯ ಒದಗಿಸಲು ನಾವು ಬದ್ಧರಾಗಿದ್ದೇವೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಜ್ಞಾನಜ್ಯೋತಿ ಸಭಾಂಗಣದಲ್ಲಿ ರಾಷ್ಟ್ರೀಯ ಒಬಿಸಿ ಮಹಾಸಂಘದ 11ನೇ ರಾಷ್ಟ್ರೀಯ ಮಹಾ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, 21 ರಾಜ್ಯಗಳಿಂದ ಬಂದಿರುವ ನಿಮ್ಮೆಲ್ಲರನ್ನು ಭೇಟಿ ಮಾಡಿರುವುದು ಸಂತೋಷ ತಂದಿದೆ. ಕಾಂಗ್ರೆಸ್ ಪಕ್ಷ ಹಾಗೂ ರಾಜ್ಯ ಸರಕಾರದ ಪರವಾಗಿ ನಿಮ್ಮೆಲ್ಲರಿಗೂ ಸ್ವಾಗತ ಕೋರುತ್ತೇನೆ. ನಾವು ವೈವಿಧ್ಯತೆಯ ದೇಶದಲ್ಲಿದ್ದೇವೆ. ಮಾನವಿಯತೆ ಮೇಲೆ ನಂಬಿಕೆ ಇಟ್ಟಿದ್ದೇವೆ. ನಮ್ಮ ರಾಜ್ಯ ಅತ್ಯಂತ ಪ್ರಾಚೀನ ಪರಂಪರೆ ಹೊಂದಿದೆ. ಬಸವಣ್ಣನವರು 12ನೇ ಶತಮಾನದಲ್ಲಿ ವಿಶ್ವದ ಮೊದಲ ಸಂಸತ್ತನ್ನು ಆರಂಭಿಸಿದರು. ಎಲ್ಲಾ ವರ್ಗದ ಜನರು ಆ ಸಂಸತ್ತಿನ ಭಾಗವಾಗಿದ್ದರು. ನಿಮಗೆ ಸಾಧ್ಯವಾದರೆ ಬೀದರ್ ಜಿಲ್ಲೆಯ ಬಸವಕಲ್ಯಾಣಕ್ಕೆ ಹೋಗಿ ಬಸವಣ್ಣನವರ ಅನುಭವ ಮಂಟಪ ವೀಕ್ಷಣೆ ಮಾಡಿ.

> ಸ್ಥಳೀಯ ಸಂಸ್ಥೆಗಳಲ್ಲೂ ನಾವು ಮೀಸಲಾತಿ ನೀಡುತ್ತಿದ್ದೇವೆ. 73-74ನೇ ತಿದ್ದುಪಡಿ ವೇಳೆ ನಾನು ರಾಜೀವ್ ಗಾಂಧಿ ಅವರಿಗೆ ಈ ತಿದ್ದುಪಡಿ ಯಾಕೆ ಎಂದು ಕೇಳಿದ್ದೆ. ಅದಕ್ಕೆ ಅವರು ಪಂಚಾಯಿತಿಯಿಂದ ಪಾರ್ಲಿಮೆಂಟ್ ವರೆಗೂ ನಾಯಕರನ್ನು ತಯಾರು ಮಾಡಬೇಕು. ಸಮಾಜದ ಎಲ್ಲಾ ವರ್ಗದ ಜನರು ನಾಯಕರಾಗಬೇಕು ಎಂಬುದು ಅವರ ಬಯಕೆಯಾಗಿತ್ತು. ಈ ದೇಶದಲ್ಲಿ ಜಾತಿ ಗಣತಿ ಅಗತ್ಯವಾಗಿದ್ದು, ಕೇಂದ್ರ ಸರಕಾರ ಮನೆ ಮನೆ ಜನಗಣತಿಗೆ ಮುಂದಾಗಿದೆ.
>
> **- ಡಿ.ಕೆ.ಶಿವಕುಮಾರ್**, ಮುಖ್ಯಮಂತ್ರಿ

ರಾಷ್ಟ್ರೀಯ ಒಬಿಸಿ ಮಹಾಸಂಘದ 11ನೇ ರಾಷ್ಟ್ರೀಯ ಮಹಾ ಸಮಾವೇಶವನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಘಾಟಿಸಿದರು.

ಬೇರೆ ರಾಜ್ಯಗಳಿಂದ ನಮ್ಮ ಗ್ಯಾರಂಟಿಗಳ ಅನುಕರಣೆ

ನಾವು ಅಧಿಕಾರಕ್ಕೆ ಬರುವ ಮುನ್ನ ನಾನು ಹಾಗೂ ಸಿದ್ದರಾಮಯ್ಯ ಅವರು ರಾಜ್ಯದ ಜನರಿಗೆ ಬೆಲೆ ಏರಿಕೆಯಿಂದ ರಕ್ಷಣೆ ನೀಡುವ ಭರವಸೆ ನೀಡಿದೆವು. ಅವರಿಗೆ ನೆರವಾಗಲು ಐದು ಗ್ಯಾರಂಟಿ ಯೋಜನೆ ಘೋಷಣೆ ಮಾಡಿದೆವು. ನಮ್ಮ ಯೋಜನೆ ನೋಡಿ ಎಲ್ಲರೂ ನಗುತ್ತಿದ್ದರು. ಪ್ರಧಾನಮಂತ್ರಿಗಳು ಈ ಯೋಜನೆಗಳ ಜಾರಿ ಅಸಾಧ್ಯ. ಪ್ರತಿ ವರ್ಷ ಈ ಯೋಜನೆಗಳಿಗಾಗಿ 52 ಸಾವಿರ ಕೋಟಿ ನೀಡುತ್ತಿದ್ದೇವೆ. ನಾವು ಗ್ಯಾರಂಟಿ ಯೋಜನೆಗಳ ಮೂಲಕ ಬಡ ಕುಟುಂಬದ ಮನೆಯೊಡತಿಗೆ ಮಾಸಿಕ 2 ಸಾವಿರ, ಮನೆಗಳಿಗೆ 200 ಯೂನಿಟ್ ವರೆಗೂ ವಿದ್ಯುತ್ ಉಚಿತ, ಶಕ್ತಿ ಯೋಜನೆ ಮೂಲಕ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ನಿರುದ್ಯೋಗಿ ಯುವಕರಿಗೆ ನಿರುದ್ಯೋಗ ಭತ್ಯೆ ನೀಡಲಾಗುತ್ತಿದೆ. ನಮ್ಮ ಯೋಜನೆಗಳನ್ನು ದೇಶದ ಇತರೆ ರಾಜ್ಯಗಳು ಅನುಸರಿಸುತ್ತಿವೆ ಎಂದು ಸಿಎಂ ತಿಳಿಸಿದರು.

ಇದು ಸರಕಾರದ ಇತಿಹಾಸ ಎಂದು ತಿಳಿಸಿದರು.

ನಾನು ಹಾಗೂ ಹರಿಪ್ರಸಾದ್ ಅವರು ಕಾಂಗ್ರೆಸ್ ಪಕ್ಷದಲ್ಲಿ ಬೆಳೆದವರು. ಕಾಂಗ್ರೆಸ್ ಸರಕಾರ ಇಲ್ಲಿದೆ. ಕಾಂಗ್ರೆಸ್ ಇತಿಹಾಸ ದೇಶದ ಇತಿಹಾಸ, ಕಾಂಗ್ರೆಸ್ ಶಕ್ತಿ ದೇಶದ ಶಕ್ತಿ, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಎಲ್ಲಾ ವರ್ಗದ ಜನರು ಅಧಿಕಾರಕ್ಕೆ ಬಂದಂತೆ. ಕಾಂಗ್ರೆಸ್ ಪಕ್ಷ ದೇಶಕ್ಕೆ ಸಂವಿಧಾನ ನೀಡಿದ್ದು, ನೆಹರೂ ಅವರ ಕಾಲದಿಂದ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗೆಲ್ಲಾ ಎಲ್ಲಾ ವರ್ಗದವರ ರಕ್ಷಣೆ ಮಾಡಲಾಗಿದೆ. ಇಂದಿರಾ ಗಾಂಧಿ ಹಾಗೂ ದೇವರಾಜ ಅರಸು ಅವರ ಕಾಲದಲ್ಲಿ ಉಳುವವನೇ ಭೂಮಿಯ ಒಡೆಯ ಎಂದು ಘೋಷಣೆ ಮಾಡಲಾಯಿತು ಎಂದರು.

ಸೆಂಟಮ್ ಎಲೆಕ್ಟ್ರಾನಿಕ್ಸ್‌ನಿಂದ ನಾಲ್ಕು ವರ್ಷಗಳಲ್ಲಿ 500 ಕೋಟಿ ಹೂಡಿಕೆ

ಬೆಂಗಳೂರು: ರಕ್ಷಣಾ ಉದ್ಯಮದಲ್ಲಿ ಹೆಸರು ಮಾಡಿರುವ ಸೆಂಟಮ್ ಎಲೆಕ್ಟ್ರಾನಿಕ್ಸ್ ಸಂಸ್ಥೆಯು ಈ ವರ್ಷದಿಂದ ಅನ್ವಯವಾಗುವಂತೆ ಮುಂದಿನ ನಾಲ್ಕು ವರ್ಷಗಳಲ್ಲಿ ರಾಜ್ಯದಲ್ಲಿ 500 ಕೋಟಿ ರು. ಹೂಡಿಕೆ ಮಾಡಲಿದೆ. ಇದರಿಂದ 1,500 ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಶುಕ್ರವಾರ ನಗರದ ಖನಿಜ ಭವನದಲ್ಲಿ ಕಂಪನಿಯ ಜಂಟಿ ವ್ಯವಸ್ಥಾಪಕ ನಿರ್ದೇಶಕ ನಿಖಿಲ್ ಮಲ್ಲವರಪ್ಪು, ಸಚಿವ ಎಂ.ಬಿ. ಪಾಟೀಲ ಅವರನ್ನು ಭೇಟಿಯಾಗಿ ವಿಚಾರ ವಿನಿಮಯ ನಡೆಸಿದರು.

ಸಚಿವ ಎಂ.ಬಿ.ಪಾಟೀಲ ಮಾತನಾಡಿ, 2025 ರಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಈ ಹೂಡಿಕೆಯ ಸಂಬಂಧ ಒಡಂಬಡಿಕೆ ಆಗಿತ್ತು. ಸೆಂಟಮ್ ಕಂಪನಿಯು ಈಗಾಗಲೇ ದೇವನಹಳ್ಳಿ ಸಮೀಪದ ವೈಮಾಂತರಿಕ್ಷ ಮತ್ತು ರಕ್ಷಣಾ ಪಾರ್ಕಿನಲ್ಲಿ ಅಗತ್ಯ ಭೂಮಿ ಹೊಂದಿದೆ. ಅಲ್ಲಿ ಮುಂದಿನ ತಿಂಗಳು ಕಾಮಗಾರಿ ಆರಂಭವಾಗಲಿದೆ. ಇಲ್ಲಿ ಕಂಪನಿಯು ಅತ್ಯಾಧುನಿಕ ಎಲೆಕ್ಟ್ರಾನಿಕ್ಸ್, ರಕ್ಷಣಾ ವಿದ್ಯುನ್ಮಾನ, ರಡಾರ್ ಸೌಕರ್ಯ ಮತ್ತು ವಿದ್ಯುನ್ಮಾನ ಸಮರ ತಂತ್ರಜ್ಞಾನಗಳ ವಿಸ್ತರಣೆ ಮಾಡಲಿದೆ ಎಂದರು.

ಕಂಪನಿಯು ಡಿ.ಆರ್.ಡಿ.ಒ., ರಕ್ಷಣಾ ವಲಯಕ್ಕೆ ಸಂಬಂಧಿಸಿದ ಸಾರ್ವಜನಿಕ ಉದ್ದಿಮೆಗಳು ಮತ್ತು ಇಸ್ರೋದಂತಹ ಸಂಸ್ಥೆಗಳೊಂದಿಗೆ ಸಹಭಾಗಿತ್ವ ಹೊಂದಿದ್ದು, ಪ್ರಮುಖ ಕ್ಷಿಪಣಿ ಮತ್ತು ಉಪಗ್ರಹ ಯೋಜನೆಗಳಿಗೆ ಕೊಡುಗೆ ನೀಡಿದೆ. ಉತ್ಪನ್ನ ವಿನ್ಯಾಸ, ಸಂಶೋಧನೆ ಮತ್ತು ಅಭಿವೃದ್ಧಿ, ಪರೀಕ್ಷಾ ಸೌಲಭ್ಯ ಮತ್ತು ಮೈಕ್ರೋ ಎಲೆಕ್ಟ್ರಾನಿಕ್ ಅಸೆಂಬ್ಲಿಂಗ್ ಕಂಪನಿ ಹೊಂದಿದೆ. ವೈಮಾಂತರಿಕ್ಷ ಮತ್ತು ರಕ್ಷಣಾ ವಲಯದ ಉದ್ದಿಮೆಯಲ್ಲಿ ರಾಜ್ಯವು ಮುಂಚೂಣಿಯಲ್ಲಿ ಇರಬೇಕು ಎನ್ನುವುದು ಸರಕಾರದ ತೀರ್ಮಾನವಾಗಿದೆ. ಹೂಡಿಕೆ ಮತ್ತು ಉದ್ಯೋಗಸೃಷ್ಟಿ ಎರಡರ ಕಡೆಗೂ ಗಮನ ಹರಿಸಿರುವ ಕಂಪನಿಗೆ ಸರಕಾರದ ಕಡೆಯಿಂದ ಅಗತ್ಯ ಸಹಕಾರ ನೀಡಲಾಗುವುದು ಎಂದರು.

ಸೆಂಟಮ್ ಎಲೆಕ್ಟ್ರಾನಿಕ್ಸ್ ಕಂಪನಿಯ ಜಂಟಿ ವ್ಯವಸ್ಥಾಪಕ ನಿರ್ದೇಶಕ ನಿಖಿಲ್ ಮಲ್ಲವರಪ್ಪು ಸಚಿವ ಎಂ.ಬಿ.ಪಾಟೀಲ ಅವರನ್ನು ಭೇಟಿ ಮಾಡಿದರು.

ನಗರದ ಬಸವನಗುಡಿ ಬುಲ್ ಟೆಂಪಲ್ ರಸ್ತೆಯಲ್ಲಿ ರಾಪಿಡ್ ಫಿಕ್ಸ್ ಕೇಂದ್ರವನ್ನು ಪದ್ಮಶ್ರೀ ಪುರಸ್ಕೃತ ವಿ.ಆರ್.ಗೌರಿಶಂಕರ್ ಉದ್ಘಾಟಿಸಿದರು. ಈ ವೇಳೆ ಚರಣ್ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಅಧ್ಯಕ್ಷ ಬಿ.ವಿ.ದ್ವಾರಕಾನಾಥ್, ಮುಖ್ಯ ಸಲಹೆಗಾರ ಎಂ.ಆರ್.ರಾಮಚಂದ್ರ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಎಸ್.ರಘುನಾಥ್ ಸೇರಿದಂತೆ ಇನ್ನಿತರರು ಇದ್ದರು.

ಲಾಲ್‌ಬಾಗ್‌ನಲ್ಲಿ ಕಲಾವನಕ್ಕೆ ಅದ್ದೂರಿ ಚಾಲನೆ

ಬೆಂಗಳೂರು: ರೋಟರಿ ಅಂತರರಾಷ್ಟ್ರೀಯ ಜಿಲ್ಲೆ 3191 ಹಾಗೂ 3192ರ ಆಶ್ರಯದಲ್ಲಿ ಲಾಲ್‌ಬಾಗ್ ಸ್ವಾತಂತ್ರ್ಯೋತ್ಸವ ಉದ್ಯಾನವನದಲ್ಲಿ 'ಕಲಾ ವನ ರೋಟರಿಯ ಹೆಜ್ಜೆ ಕಲಾವಿದರ ಕಡೆಗೆ' ಮುಕ್ತ ಕಲಾ ಪ್ರದರ್ಶನಕ್ಕೆ ಅದ್ದೂರಿಯಾಗಿ ಚಾಲನೆ ದೊರೆಯಿತು.

ಲಾಲ್‌ಬಾಗ್‌ನ ಪುಷ್ಪ ಪ್ರದರ್ಶನದ ವರ್ಣರಂಜಿತ ಸೊಬಗು, ಪ್ರಕೃತಿಯ ಹಸಿರು ಸಿರಿ ಹಾಗೂ ಕಲಾವಿದರ ಸೃಜನಾತ್ಮಕ ಕಲಾಕೃತಿಗಳು ಒಂದೇ ವೇದಿಕೆಯಲ್ಲಿ ಪ್ರದರ್ಶಿಸುವ ಮೂಲಕ ಕಾರ್ಯಕ್ರಮ ವಿಶಿಷ್ಟ ಕಲಾ ಸಂಭ್ರಮಕ್ಕೆ ಸಾಕ್ಷಿಯಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ರೋಟರಿ ಅಂತರರಾಷ್ಟ್ರೀಯ ಜಿಲ್ಲೆ 3191ರ ಜಿಲ್ಲಾ ರಾಜ್ಯಪಾಲ ಡಾ.ಅನಿಲ್ ಗುಪ್ತಾ, ಕಲೆ ಸಮಾಜದ ಆತ್ಮವಾಗಿದ್ದು, ಕಲಾವಿದರಿಗೆ ಪ್ರೋತ್ಸಾಹ ನೀಡುವುದು ಪ್ರತಿಯೊಬ್ಬರ ಸಾಮಾಜಿಕ ಹೊಣೆಗಾರಿಕೆಯಾಗಿದೆ. ಕಲಾವಿದರ ಪ್ರತಿಭೆಯನ್ನು ಜನಸಾಮಾನ್ಯರ ಬಳಿಗೆ ತಲುಪಿಸುವ ಉದ್ದೇಶದಿಂದ ಪ್ರಕೃತಿಯ ಮಡಿಲಲ್ಲೇ ಈ ವಿಶಿಷ್ಟ ಕಲಾ ಪ್ರದರ್ಶನವನ್ನು ಆಯೋಜಿಸಲಾಗಿದೆ. ರೋಟರಿಯ ಹೆಜ್ಜೆ ಕಲಾವಿದರ ಕಡೆಗೆ ಎಂಬ ಪರಿಕಲ್ಪನೆ ಕಲಾವಿದರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಿ, ಅವರ ಪ್ರತಿಭೆಗೆ ಹೊಸ ಅವಕಾಶಗಳನ್ನು ಕಲ್ಪಿಸುವ ಮಹತ್ವದ ಹೆಜ್ಜೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ರೋಟರಿ ಅಂತಾರಾಷ್ಟ್ರೀಯ ಜಿಲ್ಲೆ 3192ರ ಜಿಲ್ಲಾ ರಾಜ್ಯಪಾಲ ರವಿಶಂಕರ್ ಡಾಕೋಜು ಮಾತನಾಡಿ, ಲಾಲ್‌ಬಾಗ್ ಪುಷ್ಪ ಪ್ರದರ್ಶನದ ಬಣ್ಣಗಳ ವೈಭವ ಮತ್ತು ಕಲಾವಿದರ ಚಿತ್ರಕಲೆಗಳು ಪ್ರಕೃತಿ ಹಾಗೂ ಸಂಸ್ಕೃತಿಯ ಅದ್ಭುತ ಸಂಗಮ ವನ್ನು ಪ್ರತಿಬಿಂಬಿಸುತ್ತಿವೆ.

ಹೂಗಳ ಬಣ್ಣಗಳು ಹಾಗೂ ಕಲಾಕೃತಿಗಳ ವರ್ಣವೈವಿಧ್ಯ ಒಂದಾಗಿ ಸಂದರ್ಶಕರಿಗೆ ಅಪೂರ್ವ ಅನುಭವವನ್ನು ನೀಡುತ್ತಿವೆ. ಪ್ರಕೃತಿ, ಬಣ್ಣಗಳು ಮತ್ತು ಕಲೆಯ ಸಮನ್ವಯದ ಮೂಲಕ ಪರಿಸರ ಜಾಗೃತಿ ಹಾಗೂ ಸೃಜನಶೀಲತೆಯನ್ನು ಜನರಲ್ಲಿ ಬೆಳೆಸುವ ಉತ್ತಮ ಪ್ರಯತ್ನ ಇದಾಗಿದೆ ಎಂದು ಶ್ಲಾಘಿಸಿದರು.

ಈ ಕಲಾ ವನ ಪ್ರದರ್ಶನದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ ಹಿರಿಯ ಹಾಗೂ ಯುವ ಕಲಾವಿದರು ತಮ್ಮ ಅತ್ಯುತ್ತಮ ಕಲಾಕೃತಿ ಗಳನ್ನು ಪ್ರದರ್ಶಿಸಿದ್ದು, ಸಾವಿರಾರು ಪ್ರವಾಸಿಗರು, ಕಲಾಭಿಮಾನಿಗಳು ಹಾಗೂ ಸಾರ್ವಜನಿಕರು ಉತ್ಸಾಹದಿಂದ ವೀಕ್ಷಿಸಿದರು. ಪ್ರಕೃತಿಯ ನಡುವೆ ಕಲೆಯನ್ನು ಜನರಿಗೆ ಪರಿಚಯಿಸುವ ಈ ವಿನೂತನ ಪ್ರಯತ್ನಕ್ಕೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಯಿತು.

ಕಲಾ ವನ ರೋಟರಿಯ ಹೆಜ್ಜೆ ಕಲಾವಿದರ ಕಡೆಗೆ ಮುಕ್ತ ಕಲಾ ಪ್ರದರ್ಶನಕ್ಕೆ ಚಾಲನೆ ನೀಡಲಾಯಿತು. ರೋಟರಿ ಫೆಲೋಶಿಪ್ ಇಂಟರ್‌ನ್ಯಾಷನಲ್ ಸರ್ವಿಸ್ ನಿರ್ದೇಶಕಿ ವಾಣಿಶ್ರೀ ಪ್ರಸಾದ್, ಕಾರ್ಯದರ್ಶಿ ಪ್ರತಿಮಾ ಹಾಗೂ ಖ್ಯಾತ ಕಲಾವಿದರಾದ ಡಾ. ದೀಪಾಲಿ, ಜಗದೀಶ್ ಮತ್ತು ವರಲಕ್ಷ್ಮಿ ಇದ್ದರು.

5,000 ಕೋಟಿ ರು. ಜೆಸಿಸಿ ಹೂಡಿಕೆ ಗುರಿ

ಬೆಂಗಳೂರು: ಕರ್ನಾಟಕದಲ್ಲಿ 5,000 ಕೋಟಿ ರು. ಅಧಿಕ ಹೂಡಿಕೆ ಆಕರ್ಷಿಸಿ 50 ಹೊಸ ಗ್ಲೋಬಲ್ ಕೆಪಾಬಿಲಿಟಿ ಸೆಂಟರ್‌ಗಳನ್ನು (ಜಿಸಿಸಿ) ಸ್ಥಾಪಿಸುವ ಉದ್ದೇಶದಿಂದ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಹಾಗೂ ಗುಡ್ ವರ್ಕ್ ಗ್ರೂಪ್ ನಡುವೆ ಮಹತ್ವದ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

ಈ ಕುರಿತು ಕೆಡಿಇಎಂ ಸಿಇಒ ಸಂಜೀವ್ ಗುಪ್ತಾ, ಈ ಒಪ್ಪಂದವು ಕರ್ನಾಟಕದ ಜಿಸಿಸಿ ಬೆಳವಣಿಗೆ ಮತ್ತಷ್ಟು ವೇಗಗೊಳಿಸಲಿದೆ. ಗುಡ್ ವರ್ಕ್ ಗ್ರೂಪ್ ಸಹ-ಸಂಸ್ಥಾಪಕ ವಿಶಾಲ್ ಮುದ್ದಲ್ ಕರ್ನಾಟಕ ಜಾಗತಿಕ ಕಂಪನಿಗಳ ಮೊದಲ ಆಯ್ಕೆಯ ಹೂಡಿಕೆ ತಾಣವನ್ನಾಗಿ ರೂಪಿಸುವ ಗುರಿ ಹೊಂದಿರುವುದಾಗಿ ತಿಳಿಸಿದ್ದಾರೆ. ಈ ಪಾಲುದಾರಿಕೆಯಿಂದ 62,500ಕ್ಕೂ ಹೆಚ್ಚು ನೇರ ಮತ್ತು ಪರೋಕ್ಷ ಉದ್ಯೋಗ, 2,250 ಕೋಟಿ ರು. ವಾರ್ಷಿಕ ವೇತನದ ಆರ್ಥಿಕ ಚಟುವಟಿಕೆ ಹಾಗೂ 1.25 ಮಿಲಿಯನ್ ಚದರ ಅಡಿ ವಾಣಿಜ್ಯ ಕಚೇರಿ ವಿಸ್ತರಣೆ ಆಗುವ ನಿರೀಕ್ಷೆಯಿದೆ. ಜಾಗತಿಕ ಕಂಪನಿಗಳನ್ನು ಕರ್ನಾಟಕಕ್ಕೆ ಸೆಳೆಯಲು ಹೂಡಿಕೆ ಪ್ರೋತ್ಸಾಹ, ನೀತಿ ಬೆಂಬಲ, ಕೌಶಲ್ಯಾಭಿವೃದ್ಧಿ ಹಾಗೂ ಉದ್ಯಮ-ಶೈಕ್ಷಣಿಕ ಸಹಭಾಗಿತ್ವಕ್ಕೆ ಉತ್ತೇಜನ ನೀಡಲಾಗುವುದು. ಪ್ರಸ್ತುತ ಕರ್ನಾಟಕದಲ್ಲಿ 1,100ಕ್ಕೂ ಹೆಚ್ಚು ಜಿಸಿಸಿಗಳು ಕಾರ್ಯನಿರ್ವಹಿಸುತ್ತಿದ್ದು, ದೇಶದ ಒಟ್ಟು ಜಿಸಿಸಿಗಳಲ್ಲಿ ಸುಮಾರು ಶೇ.40ರಷ್ಟು ಪಾಲು ರಾಜ್ಯದಲ್ಲಿದೆ ಎಂದರು.

190.25 ಕಿ.ಮೀ. ಅತಿಕ್ರಮಣ ಮುಕ್ತ

ಬೆಂಗಳೂರು: ಪಾದಚಾರಿಗಳಿಗೆ ಸುರಕ್ಷಿತ ಹಾಗೂ ಅಡೆತಡೆಯಿಲ್ಲದ ಸಂಚಾರ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆ ಶುಕ್ರವಾರವು ಮುಂದುವರೆದಿದ್ದು, ಜುಲೈ 1ರಿಂದ ಆಗಸ್ಟ್ 9ರವರೆಗೆ ಒಟ್ಟು 190.25 ಕಿ.ಮೀ ಪಾದಚಾರಿ ಮಾರ್ಗ ಅತಿಕ್ರಮಣ ಮುಕ್ತಗೊಳಿಸಲಾಗಿದೆ. ಶುಕ್ರವಾರ ಹೆಬ್ಬಾಳ ವಿಭಾಗದ 108 ಸರ್ಕಲ್ ಗಂಗಾನಗರದ 5ನೇ ಮುಖ್ಯರಸ್ತೆಯಿಂದ ಬಳ್ಳಾರಿ ರಸ್ತೆ ಸರ್ವಿಸ್ ರಸ್ತೆ ಮೂಲಕ ಫೋರ್ ಸೀಸನ್ ಹೋಟೆಲ್ ವರೆಗೆ 1.40 ಕಿ.ಮೀ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಜುಲೈ 1ರಿಂದ ಇದುವರೆಗೆ ನಡೆದ ಒಟ್ಟು ಕಾರ್ಯಾಚರಣೆಯಲ್ಲಿ 478 ಅಂಗಡಿ, 627 ತಳ್ಳುವ ಗಾಡಿ, 1,465 ಶೀಟ್, 1,706.20 ಟನ್ ನಿರ್ಮಾಣ ತ್ಯಾಜ್ಯದುರಸ್ತಿ ಮಾಡಲಾಗಿದೆ ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಮುಂದುವರಿದ ಪಾದಚಾರಿ ಮಾರ್ಗ ಒತ್ತುವರಿ ತೆರವು

ಬೆಂಗಳೂರು: ಪಾದಚಾರಿಗಳಿಗೆ ಸುರಕ್ಷಿತ ಹಾಗೂ ಸುಗಮ ಸಂಚಾರ ಕಲ್ಪಿಸುವ ಉದ್ದೇಶದಿಂದ ಬೆಂಗಳೂರು ಕೇಂದ್ರ ಹಾಗೂ ಪಶ್ಚಿಮ ನಗರ ಪಾಲಿಕೆಗಳು ಶುಕ್ರವಾರ ಪಾದಚಾರಿ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿ ಒಟ್ಟು 9.8 ಕಿ.ಮೀ. ಪಾದಚಾರಿ ಮಾರ್ಗ ಮತ್ತು ರಸ್ತೆಗಳನ್ನು ಒತ್ತುವರಿಯಿಂದ ಮುಕ್ತಗೊಳಿಸಿವೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ನಾಲ್ಕು ವಿಭಾಗಗಳ ಐದು ಪ್ರಮುಖ ರಸ್ತೆಗಳಲ್ಲಿ 4.60 ಕಿ.ಮೀ. ವ್ಯಾಪ್ತಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ 27 ತಳ್ಳುಗಾಡಿ, 20 ಪೆಟ್ಟಿ ಅಂಗಡಿ, 4 ತಾತ್ಕಾಲಿಕ ಶೆಡ್ಡು, 9 ಮೆಟ್ಟಿಲು, 12 ಜಾಹೀರಾತು ನಾಮಫಲಕ, 50 ಕ್ಯಾನೋಪಿಗಳು ಹಾಗೂ 33 ಟನ್ ತ್ಯಾಜ್ಯ ತೆರವುಗೊಳಿಸಲಾಯಿತು. ಈ ಕಾರ್ಯಾಚರಣೆಗೆ 50 ಕಾರ್ಮಿಕರು, 4 ಜೆಸಿಬಿಗಳು, 6 ಟ್ರ್ಯಾಕ್ಟರ್‌ಗಳು ಹಾಗೂ 4 ಟಿಪ್ಪರ್‌ಗಳನ್ನು ಬಳಸಲಾಗಿದ್ದು, ಸಂಚಾರ ಪೊಲೀಸ್ ಹಾಗೂ ಇತರೆ ಇಲಾಖೆಗಳ ಸಹಯೋಗದಲ್ಲಿ ಕಾರ್ಯಾಚರಣೆ ಯಶಸ್ವಿಯಾಗಿ ಪೂರ್ಣಗೊಂಡಿತು ಎಂದು ಕೇಂದ್ರ ನಗರ ಪಾಲಿಕೆ ಆಯುಕ್ತ ಜಗದೀಶ್ ಜಿ.ತಿಳಿಸಿದ್ದಾರೆ.

ಇದೇ ವೇಳೆ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ 5.2 ಕಿ.ಮೀ. ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಲಾಯಿತು. ಕಾರ್ಯಾಚರಣೆಯಲ್ಲಿ 11 ಪೆಟ್ಟಿ ಅಂಗಡಿ, 10 ತಳ್ಳುಗಾಡಿ, 4 ಕ್ಯಾನೋಪಿ, 13 ಮೆಟ್ಟಿಲು ಮತ್ತು ರ್ಯಾಂಪಗಳು, 27 ಜಾಹೀರಾತು ಫಲಕ ಹಾಗೂ 15 ಟನ್ ಕಟ್ಟಡ ತ್ಯಾಜ್ಯ ತೆರವುಗೊಳಿಸಲಾಯಿತು. ಜುಲೈ 1ರಿಂದ ಇದುವರೆಗೆ ಪಶ್ಚಿಮ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 176.97 ಕಿ.ಮೀ. ಪಾದಚಾರಿ ಮಾರ್ಗ ಒತ್ತುವರಿಯಿಂದ ಮುಕ್ತಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜೆಬಿಎ ಅಧಿಕಾರಿಗಳ ನೇತೃತ್ವದಲ್ಲಿ ಪಾದಚಾರಿ ಮಾರ್ಗ ತೆರವು ಕಾರ್ಯಾಚರಣೆ ನಡೆಯಿತು.

ಪ್ರಶಸ್ತಿ ವಿತರಣೆ ಕಾರ್ಯಕ್ರಮದಲ್ಲಿ ಗಣಿ ಮತ್ತು ಜವಳಿ ಇಲಾಖೆಯ ಕಾರ್ಯದರ್ಶಿ ರೋಹಿಣಿ ಸಿಂಧೂರಿ

ಕೈಮಗ್ಗ ಕ್ಷೇತ್ರದ ಪ್ರಚಾರಕ್ಕೆ ವಿಶೇಷ ಅನುದಾನ ಮೀಸಲು

ಬೆಂಗಳೂರು: ರಾಜ್ಯದ ಶ್ರೀಮಂತ ಕೈಮಗ್ಗ ಪರಂಪರೆ ಸಂರಕ್ಷಿಸಿ, ನೇಕಾರರ ಜೀವನೋಪಾಯ ಬಲಪಡಿಸುವ ಜತೆಗೆ ಕರ್ನಾಟಕದ ಕೈಮಗ್ಗ ಉತ್ಪನ್ನಗಳಿಗೆ ರಾಷ್ಟ್ರೀಯ ಹಾಗೂ ಜಾಗತಿಕ ಮಾರುಕಟ್ಟೆಯಲ್ಲಿ ಹೊಸ ಗುರುತನ್ನು ಸೃಷ್ಟಿಸುವ ಉದ್ದೇಶದಿಂದ, ರಾಜ್ಯ ಸರಕಾರ ಮುಂಬರುವ ಕರ್ನಾಟಕ ಜವಳಿ ಮತ್ತು ಉಡುಪು ನೀತಿಯಲ್ಲಿ ಕೈಮಗ್ಗ ಕ್ಷೇತ್ರದ ಪ್ರಚಾರಕ್ಕೆ ವಿಶೇಷ ಅನುದಾನ ಮೀಸಲಿಡಲಾಗಿದೆ ಎಂದು ಎಂಎಸ್‌ಎಂಇ, ಗಣಿ ಮತ್ತು ಜವಳಿ ಇಲಾಖೆಯ ಕಾರ್ಯ ದರ್ಶಿ ರೋಹಿಣಿ ಸಿಂಧೂರಿ ತಿಳಿಸಿದರು.

ಶುಕ್ರವಾರ 12ನೇ ರಾಷ್ಟ್ರೀಯ ಕೈಮಗ್ಗ ದಿನಾಚರಣೆ ಅಂಗವಾಗಿ ನಗರದಲ್ಲಿ ನಡೆದ ರಾಜ್ಯಮಟ್ಟದ ಕಾರ್ಯಕ್ರಮದಲ್ಲಿ ಪ್ರಶಸ್ತಿ ವಿತರಿಸಿ ಮಾತನಾಡಿ, ರಾಜ್ಯದ ಕೈಮಗ್ಗ ಪರಂಪರೆ ಕೇವಲ ಸಾಂಸ್ಕೃತಿಕ ಪರಂಪರೆಯಲ್ಲ, ಸಾವಿರಾರು ನೇಕಾರರ ಜೀವನಾಧಾರವೂ ಹೌದು. ಈ ಪರಂಪರೆ ಸಂರಕ್ಷಿಸುವುದರ ಜತೆಗೆ ಆಧುನಿಕ ಮಾರುಕಟ್ಟೆಯ ಅಗತ್ಯಗಳಿಗೆ ತಕ್ಕಂತೆ ರೂಪಾಂತರಗೊಳಿಸಿ, ಹೊಸ ತಲೆಮಾರಿಗೆ ತಲುಪಿಸುವ ಜವಾಬ್ದಾರಿ ಸರಕಾರದ ಮೇಲಿದೆ. ವಿಶೇಷ ಅನುದಾನದ ಮೂಲಕ ಕೈಮಗ್ಗ ಕ್ಷೇತ್ರದಲ್ಲಿ ವಿನ್ಯಾಸ ಅಭಿವೃದ್ಧಿ, ಉತ್ಪನ್ನ ಮೌಲ್ಯವರ್ಧನೆ, ಬ್ರ್ಯಾಂಡಿಂಗ್, ಡಿಜಿಟಲ್ ಮಾರುಕಟ್ಟೆ, ಇ-ಕಾಮರ್ಸ್, ಮಾರುಕಟ್ಟೆ ವಿಸ್ತರಣೆ ಹಾಗೂ ನೇಕಾರರ ಸ್ಪರ್ಧಾತ್ಮಕ ಸಾಮರ್ಥ್ಯ ಹೆಚ್ಚಿಸಲು ವಿಶೇಷ ಕಾರ್ಯಕ್ರಮ ಜಾರಿಗೊಳಿಸಲಾಗುವುದು ಎಂದರು.

ಜವಳಿ ಅಭಿವೃದ್ಧಿ ಆಯುಕ್ತ ಎ.ಬಿ. ಬಸವರಾಜು ಮಾತನಾಡಿ, ಕರ್ನಾಟಕದ ಕೈಮಗ್ಗ ಉತ್ಪನ್ನಗಳನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮತ್ತಷ್ಟು ಸ್ಪರ್ಧಾತ್ಮಕವಾಗಿ ಪರಿಚಯಿಸುವ ಗುರಿಯೊಂದಿಗೆ ಹೊಸ ಜವಳಿ ನೀತಿ ರೂಪಿಸಲಾಗುತ್ತಿದೆ.

ಕರ್ನಾಟಕದ ಕೈಮಗ್ಗ ಕ್ಷೇತ್ರವು ನಮ್ಮ ಸಂಸ್ಕೃತಿ ಮತ್ತು ಆರ್ಥಿಕತೆಯ ಅಮೂಲ್ಯ ಆಸ್ತಿ. ಹೊಸ ಜವಳಿ ನೀತಿ ಹಾಗೂ ಸಾಮಾಜಿಕ ಜಾಲತಾಣ ಅಭಿಯಾನದ ಮೂಲಕ ರಾಜ್ಯದ ಕೈಮಗ್ಗ ಉತ್ಪನ್ನ ರಾಷ್ಟ್ರೀಯ ಮತ್ತು ಜಾಗತಿಕ ಮಾರುಕಟ್ಟೆಗೆ ಮತ್ತಷ್ಟು ಪರಿಣಾಮಕಾರಿಯಾಗಿ ಕೊಂಡೊಯ್ಯುವ ಗುರಿ ಹೊಂದಿದ್ದೇವೆ ಎಂದರು.

> ಕೈಮಗ್ಗವು ಕೇವಲ ಒಂದು ವೃತ್ತಿಯಲ್ಲ, ಅದು ನಮ್ಮ ಸಂಸ್ಕೃತಿ, ಸಂಪ್ರದಾಯ ಮತ್ತು ಬದುಕಿನ ಅವಿಭಾಜ್ಯ ಅಂಗವಾಗಿದೆ. ನೇಕಾರರ ಕೈಚಳಕವನ್ನು ಗೌರವಿಸುವುದು ನಮ್ಮ ಪರಂಪರೆ ಉಳಿಸುವುದಕ್ಕೆ ಸಮಾನ.
>
> **-ಉಮಾಶ್ರೀ,** ವಿಧಾನ ಪರಿಷತ್ ಸದಸ್ಯೆ

ರಾಷ್ಟ್ರೀಯ ಕೈಮಗ್ಗ ದಿನಾಚರಣೆ ಅಂಗವಾಗಿ ಆಯೋಜಿಸಲಾದ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ರೋಹಿಣಿ ಸಿಂಧೂರಿ ವೀಕ್ಷಿಸಿದರು. ಈ ವೇಳೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ನಾಗೇಂದ್ರ ಕುಮಾರ್, ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳದ ಅಧ್ಯಕ್ಷ ಬಿ.ಜೆ. ಗಣೇಶ್ ಸೇರಿದಂತೆ ಇನ್ನಿತರರು ಇದ್ದರು.